**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ
## ಸೆಷನ್ಸ್ ಕೇಸ್ ನಂಬರ್ : 252/2022

**ಫ್ರಾಸಾ- 4 ಚಾಸಾ- 4**

ಸಾಕ್ಷಿದಾರರ ಹೆಸರುಃ : ಸದಾನಂದ

ತಂದೆಯ ಹೆಸರುಃ : ಪಾಲಾಕ್ಷ

ವಯಸ್ಸುಃ : 46 ವರ್ಷ

ಉದ್ಯೋಗಃ : ವ್ಯವಸಾಯ

ವಾಸ : ಕಿತ್ತಗಳಲೆ ಗ್ರಾಮ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-02-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ಚಾಸಾ-1 ರಿಂದ 3ರವರ ಪರಿಚಯವಿಲ್ಲ. ಚಾಸಾ-5 ಮತ್ತು 6ರವರು ನಮ್ಮೂರಿನವರು. ನನಗೆ ಆರೋಪಿ ಸತೀಶನ ಪರಿಚಯವಿಲ್ಲ. (ಆರೋಪಿ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆಗೆ ತಕರಾರಿಲ್ಲವೆಂದು ವಕೀಲರು ಹೇಳಿರುತ್ತಾರೆ.) ಸದರಿ ಆರೋಪಿ ಸತೀಶ ತಂದೆ ಶಿವಮಣಿ ಏನು ಕೆಲಸ ಮಾಡಿಸುತ್ತಾರೆ, ಯಾವ ಊರಿನವರು, ಅವರ ಕೈಕೆಳಗಡೆ ಯಾರು ಯಾರು ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅವರನ್ನು ಮತ್ತು ಅವರ ಕಡೆಯವರನ್ನು ನನ್ನ ಮನೆಯ ಕಾಂಪೌಂಡ್ ಗೋಡೆ ಕೆಲಸಕ್ಕೆ ನಾನು ಕರೆಸಿಲ್ಲ. ಆನಂದ್ ಎಂಬುವವರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ

ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ನನ್ನ ವಾಸದ ಮನೆಯ ಪಕ್ಕದಲ್ಲಿ ಒಂದು ಲೈನ್ ಮನೆ ಇದ್ದು ಅದರ ಮುಂಭಾಗದಲ್ಲಿ ಮತ್ತೊಂದು ಶೆಡ್ ನ್ನು ನಿರ್ಮಿಸಲು ಫೌಂಡೇಶನ್ ಕೆಲಸ ಮಾಡಿಸುತ್ತಿದ್ದೆನು ಎಂದರೆ ಸರಿಯಲ್ಲ. ಈ ಕೆಲಸಕ್ಕೆ ಆರೋಪಿ ಸತೀಶ ಚಾಸಾ-1ರಿಂದ 3ರವರನ್ನು ಮತ್ತು ಉತ್ತರಪ್ರದೇಶ ಮೂಲದ ಆನಂದ್ ಎಂಬುವವರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ದಿನಾಂಕ 5-6-2022ರಂದು ನಾನು ಲೈನ್ ಮನೆ ಹತ್ತಿರ ಬಂದಾಗ ಆನಂದ ಎಂಬುವವರು ಲೈನ್ ಮನೆಯ ಕಾಂಪೌಂಡ್ ಮೇಲೆ ಬಿದ್ದಿದ್ದರು, ಅವರಿಗೆ ಮೈಮೇಲೆಲ್ಲ ಗಾಯಗಳಾಗಿದ್ದು ಕಂಡುಬಂತು ಎಂದರೆ ಸರಿಯುಲ್ಲ. ಆಗ ನಾನು, ಕೆಲಸ ಮಾಡುವಾಗ ಬಿದ್ದು ಗಾಯಮಾಡಿಕೊಂಡಿರಬಹುದೆಂದು ತಿಳಿದು ಚಾಸಾ-8ರವರ ಆಟೋದಲ್ಲಿ ಹೊಸಕೋಟೆಯ ಮಣಿಪಾಲ ಕ್ಲಿನಿಕ್ ಗೆ ಕಳುಹಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಅಲ್ಲಿ ವೈದ್ಯರು ಪರೀಕ್ಷಿಸಿ ಆನಂದ ಮೃತಪಟ್ಟಿದ್ದಾರೆಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು ವಿಚಾರ ಮಾಡಿದಾಗ, ಆರೋಪಿ ಸತೀಶನು ಚಾಸಾ-1 ರಿಂದ 3 ಮತ್ತು ಮೃತ ಆನಂದ ರವರನ್ನು ನಮ್ಮ ಮನೆಯ ಕಾಂಪೌಂಡ್ ಕೆಲಸ ಮಾಡಿಸುತ್ತಿದ್ದ ಸಮಯದಲ್ಲಿ ಲೈನ್ಮನೆಯ ಒಂದು ಭಾಗದಲ್ಲಿ ಆರೋಪಿ ಸತೀಶ ಮತ್ತು ಮೃತ ಆನಂದ ಇನ್ನೊಂದು ಭಾಗದಲ್ಲಿ ಚಾಸಾ-1 ರಿಂದ 3 ರವರು ಮಲಗುತ್ತಿದ್ದರು, ಪ್ರತಿದಿನ ಆರೋಪಿ ಮದ್ಯವನ್ನು ತೆಗೆದುಕೊಂಡು ಬರುತ್ತಿದ್ದು ಎಲ್ಲರೂ ಮದ್ಯಪಾನ ಮಾಡುತ್ತಿದ್ದರು ಹಾಗೂ ಸತೀಶ ಮತ್ತು ಆನಂದ ಆಗಾಗ್ಗೆ ಮದ್ಯಪಾನ ಮಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದರು, ದಿಃ4-6-2022ರಂದು ಎಲ್ಲರೂ ಕೆಲಸ ಮುಗಿಸಿ ಸಂಜೆ 7 ಗಂಟೆಗೆ ಆರೋಪಿಯು ಮದ್ಯವನ್ನು ತೆಗೆದುಕೊಂಡು ಲೈನ್ಮನೆಗೆ ಬಂದನು,ಅವರು ಮತ್ತು ಮೃತ

ಆನಂದ ಹಾಗೂ ಚಾಸಾ-1 ರಿಂದ 3 ರವರು ಮದ್ಯಪಾನ ಮಾಡಿ ಮಲಗಿದ ನಂತರ ಆನಂದ ಮತ್ತು ಆರೋಪಿ ಗಲಾಟೆ ಮಾಡಿಕೊಳ್ಳುತ್ತಲೇಇದ್ದರು, ರಾತ್ರಿ 11 ಗಂಟೆಗೆ ಚಾಸಾ-1 ರಿಂದ 3ರವರು ಅವರಿಬ್ಬರಿಗೂ ಸುಮ್ಮನೆ ಇರುವಂತೆ ಹೇಳಿದರೂ ಸಹ ಆರೋಪಿಗೆ ಆನಂದ ಇನ್ನೂ ಮದ್ಯಪಾನ ಬೇಕು ತೆಗೆದುಕೊಂಡು ಬಾ ಎಂದು ಗಲಾಟೆ ಮಾಡುತ್ತಿದ್ದನು, ಆಗ ಸತೀಶನು ಈಗ ಕುಡಿದಿರುವುದೇ ಸಾಕು ಇನ್ನು ಯಾವ ಮದ್ಯ ಬೇಕು ಎಂದು ಅವನಿಗೆ ಬೈದನು ಮತ್ತು ನೀನು ಬದುಕಿದ್ದರೆ ತಾನೇ ಮದ್ಯ ಕೇಳುವುದು ಮತ್ತು ಅದನ್ನು ಕುಡಿದು ಗಲಾಟೆ ಮಾಡುವುದು ಎಂದು ಅಲ್ಲೇ ಪಕ್ಕದಲ್ಲಿದ್ದ ಕಬ್ಬಿಣದ ಸುತ್ತಿಗೆ ತೆಗೆದು ಆನಂದನ ತಲೆಗೆ ಮತ್ತು ದೊಣ್ಣೆಯಿಂದ ಕೈಕಾಲುಗಳಿಗೆ ಹೊಡೆದು ಕೊಲೆ ಮಾಡಿದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನಂತರ ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಲೈನ್ಮನೆಯ ಮುಂಭಾಗದಲ್ಲಿ ನಿರ್ಮಿಸುತ್ತಿದ್ದ ಫೌಂಡೇಷನ್ ನಲ್ಲಿ ಮಲಗಿಸಿದ ವಿಚಾರ ನನಗೆ ತಿಳಿಯಿತು  ಎಂದರೆ ಸರಿಯಲ್ಲ.

ಚಾಸಾ-1 ರಿಂದ 3 ರವರಿಗೆ ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಇದೇ ಗತಿ ಮಾಡುತ್ತೇನೆ ಎಂದು ಆರೋಪಿ ಕೊಲೆ ಬೆದರಿಕೆ ಹಾಕಿರುತ್ತಾನೆ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ಈಎಲ್ಲ ವಿಚಾರವಾಗಿ ಈಗ ನನಗೆಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿ ನನ್ನ ಮನೆಕಾಂಪೌಂಡ್ ಕೆಲಸ ಮಾಡಿದ್ದರೂ ಕೂಡ ಮತ್ತು ಆ ಸಮಯದಲ್ಲಿ ಆತ ಮದ್ಯಪಾನ ಮಾಡಿ ಆನಂದನನ್ನು ಹೊಡೆದು ಕೊಲೆ ಮಾಡಿದ ವಿಚಾರ ತಿಳಿದರೂ ಕೂಡ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**